(ಸದನವು ಪುನ: ಮಧ್ಯಾಹ್ನ 2 ಗಂಟೆ 41 ನಿಮಿಷಗಳಿಗೆ ಸಮಾವೇಶಗೊಂಡಿತು. ಸಭಾಧ್ಯಕ್ಷರು (ಶ್ರೀ ಜಗದೀಶ್ ಶೆಟ್ಟರ್‌ರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

ವಿಧೇಯಕಗಳನ್ನು ಪರ್ಯಾಲೋಚಿಸುವುದು ಮತ್ತು ಅಂಗೀಕರಿಸುವುದು

(2) ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ವಿಧೇಯಕ 2009 ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಸ್. ಸುರೇಶ್ ಕುಮಾರ್(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೆ, "2009ನೇ ಸಾಲಿನ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :- ರಾಜ್ಯದಲ್ಲಿ ವೈದ್ಯಕೀಯ ವಿಜ್ಞಾನಕ್ಕೋಸ್ಕರ ಒಂದು ವಿಶ್ವವಿದ್ಯಾಲಯ ಇದೆ. ಅದೇ ತರಹ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವಿದೆ. ನಮ್ಮ ರಾಜ್ಯದಲ್ಲಿ ಸುಮಾರು 85 ಕಾನೂನು ವಿದ್ಯಾ ಸಂಸ್ಥೆಗಳಿವೆ. ಇದನ್ನೆಲ್ಲ ಪರಿಗಣಿಸಿ ಪ್ರತ್ಯೇಕವಾದ ಕಾನೂನು ವಿಶ್ವವಿದ್ಯಾಲಯವನ್ನು ಸ್ಥಾಪಿಸುವುದು ಅಗತ್ಯವಿದೆಯೆಂದು ಸುಮಾರು 5 ವರ್ಷಗಳ ಹಿಂದೆ ಸನ್ಮಾನ್ಯ ಹೆಚ್.ಕೆ. ಪಾಟೀಲ್‌ರವರು ಕಾನೂನು ಮಂತ್ರಿಯಾಗಿದ್ದಾಗ ಇದು ಪ್ರಾರಂಭವಾಗಿತ್ತು. ಬಹಳ ದೀರ್ಘ ಪ್ರಯಾಣದ ನಂತರ ಇವತ್ತು ಇದು ಅಧಿವೇಶನಕ್ಕೆ ಬಂದು ತಲುಪಿದೆ. ಒಟ್ಟಾರೆ ಒಂದು ಕಾನೂನು ವಿಶ್ವವಿದ್ಯಾಲಯವಿರಬೇಕು, ರಾಜ್ಯದ ಎಲ್ಲಾ ಕಾನೂನು ಕಾಲೇಜು ಗಳು ಇದರಡಿಯಲ್ಲಿ ಬರಬೇಕು ಮತ್ತು ಕಾನೂನಿನ ಒಳ ಅಂಶ, ಸಂದರ್ಭ, ಅರ್ಥ ಮತ್ತು ಉದ್ದೇಶದ ಬಗ್ಗೆ ಸಾರ್ವತ್ರಿಕ ಅರಿವನ್ನು ಮೂಡಿಸಬೇಕು. ಆ ಯೂನಿವರ್ಸಿಟಿಯಲ್ಲಿ ಕರಡು ಶಾಸನಗಳ ರಚನೆ, ಶಾಸನಗಳ ವ್ಯಾಖ್ಯಾನ ಇದರ ಬಗ್ಗೆ ಒಂದು ಶಾಖೆಯನ್ನು ಪ್ರಾರಂಭಿಸುವುದಾಗಿದೆ. ಒಟ್ಟಾರೆ ಒಂದು ಕಾನೂನು ವಿಶ್ವವಿದ್ಯಾಲಯದ ಅಗತ್ಯವಿದೆಯೆಂದು ಹಿಂದಿನ ಎಲ್ಲಾ ಸರ್ಕಾರಗಳು ಮನಗಂಡು ಇವತ್ತು ಈ ವಿಧೇಯಕ ಇಲ್ಲಿಗೆ ಬಂದಿದೆ. ಇದನ್ನು ಎರಡೂ ಸದನಗಳು ಉಪವೇಶನದಲ್ಲಿ ಇರಲಿಲ್ಲವಾದ್ದರಿಂದ

2008ರ ಡಿಸೆಂಬರ್ 15ನೇ ತಾರೀಖಿನಂದು ಅಧ್ಯಾದೇಶವಾಗಿತ್ತು. ಆ ಅಧ್ಯಾದೇಶ ಜನವರಿ 1ರಿಂದ ಜಾರಿಗೆ ಬಂದಿದೆ. ದಯವಿಟ್ಟು, ನಾನು ಸದನದ ಎಲ್ಲಾ ಸದಸ್ಯರನ್ನು ಈ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ (ಶಿರಾ) :- ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಮಂಡಿಸಿದ Law University Bill ಗೆ ನಮ್ಮ ಸಂಪೂರ್ಣವಾದ ಸಹಕಾರವಿದೆ ಮತ್ತು ನಾನು ಇದನ್ನು ಸ್ವಾಗತ ಕೂಡ ಮಾಡುತ್ತೇನೆ. ಬಹಳ ವರ್ಷಗಳ ನಂತರ ಈ University ಆಗುವ ಸಂದರ್ಭ ಒದಗಿ ಬಂತು. ಈ Bill ಮಂಡನೆ ಮಾಡಿದ್ದಕ್ಕೆ ನಾನು Parliamentary Affairs Minister ರವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಒಂದು ಪರಿಪಾಠವನ್ನು ನಾವು ಕಲಿಯಬೇಕಾಗುತ್ತದೆ. ನಾನು ಅದನ್ನು ಸುರೇಶ್ ಕುಮಾರ್‌ರವರಂಥ ಮಂತ್ರಿಯವರಿಂದ ನಿರೀಕ್ಷೆ ಮಾಡುತ್ತೇನೆ. ಯಾವುದೇ ಒಂದು ಬಿಲ್ ಬರಬೇಕಾದಾಗ ಹೊಸ ಬಿಲ್‌ಗಳನ್ನು ordinance ತಂದು ಆಮೇಲೆ replacement ಗೆ House ಗೆ ತರುವುದು ಸಂಪ್ರದಾಯವಾಗಬಾರದು. ಇಲ್ಲಿಯವರೆಗೆ ಬಂದಿರುವ ಎಲ್ಲವೂ ಅಷ್ಟೇ. ಎಲ್ಲಾ Bills ಗೆ ordinance ಮಾಡುವುದು ಆಮೇಲೆ replacement ಗೆ ತರುವುದು. ನೀವು ಯಾವಾಗ ordinance ತರಬೇಕೆಂದರೆ, ಯಾವುದೋ ಒಂದು ಸಂದರ್ಭದಲ್ಲಿ amendments ಬೇಕಾಗುತ್ತದೆ, minor changes ಬೇಕಾಗುತ್ತದೆ, ಅಂಥ ಸಂದರ್ಭದಲ್ಲಿ ಇದು ಇರಬೇಕೇ ವಿನಃ ಎಲ್ಲಾ ಸಂದರ್ಭದಲ್ಲೂ ಈ ರೀತಿ ordinance ತಂದು Act ಅನ್ನು ತರುವ ಪರಿಪಾಠವಾಗಬಾರದು. ದಿನಕಳೆದಂತೆ ನಮ್ಮ ಪ್ರಜಾಪ್ರಭುತ್ವಕ್ಕೆ ವಯಸ್ಸಾದ ಹಾಗೆ ನಾವು ಬಹಳ ಉತ್ತಮವಾದ ಸ್ಥಿತಿಗೆ ಹೋಗುತ್ತಿಲ್ಲ. ಯಾವುದೇ ಬಿಲ್ ತರಬೇಕಾದ ಸಂದರ್ಭದಲ್ಲೂ ಕೂಡ ಮೊದಲು ನಿಮ್ಮ ಪಕ್ಷದ ಸಭೆಗಳಲ್ಲಿ ಚರ್ಚೆಯಾಗಬೇಕು, ಅದರ ಸಾಧಕ ಬಾಧಕಗಳ ಬಗ್ಗೆ ಚರ್ಚೆ ಮಾಡಿ ನಂತರ ಅದು ಕಾನೂನು ಇಲಾಖೆಗೆ ಹೋಗಿ ಅದರ ನಂತರ House ಮುಂದೆ ಮಂಡಿಸುವುದು ಇದೆ. ಇದೊಂದು ಒಂದು ರೀತಿ Bureaucratic Act ಆಗಿಬಿಟ್ಟಿದೆ. ಅವರ ಅನುಕೂಲಕ್ಕೆ ತಕ್ಕ ಹಾಗೆ Act ಮಾಡಿಕೊಳ್ಳುತ್ತಾರೆ. ನಾವೇನೋ pass ಮಾಡುವುದು ಇದೆ. ಆಮೇಲೆ Act ಆದ 6 ತಿಂಗಳೊಳಗೆ ಮತ್ತೆ amendments, ಅದು, ಇದು ಬರುತ್ತದೆ. ಇದು ಹೋಗಬೇಕೆಂದು ಹೇಳಿದರೆ ಯಾವುದೇ ಒಂದು ಕಾನೂನು ಮಾಡಬೇಕಾದರೆ ಅದಕ್ಕೊಂದು ದೂರದೃಷ್ಟಿ

ಬೇಕಾಗುತ್ತದೆ. ಕೊನೆಯ ಪಕ್ಷ 5 ರಿಂದ 10 ವರ್ಷದವರೆಗೆ amendments ಬರದ ರೀತಿಯಲ್ಲಿ ಮಾಡಬೇಕಾಗುತ್ತದೆ. ಅದು ಆಗಬೇಕೆಂದರೆ, ಈಗ ನೀವು ಹೇಳಿದ ರೀತಿಯಲ್ಲಿ Law University ಆದರೆ ಅಲ್ಲಿಂದ ಈಗ ಇರುವಂಥ ಪ್ರಸ್ತಾವನೆಗಳನ್ನು ಪರಿಶೀಲನೆ ಮಾಡಿದರೆ ಆ ಇಲಾಖೆಗೆ ಒಂದು ಘನತೆ ಮತ್ತು ಮಹತ್ವ ತಂದುಕೊಡುವುದಕ್ಕೆ ಸಾಧ್ಯವಾಗುತ್ತದೆ ಎಂದು ನಾನು ಭಾವಿಸಿಕೊಂಡಿದ್ದೇನೆ. ಒಂದು ಬಹಳ ಸಂತೋಷವೇನೆಂದರೆ, ನಂಜುಂಡಪ್ಪ ವರದಿಯ ಹಿನ್ನೆಲೆಯಲ್ಲಿ ಪ್ರಾದೇಶಿಕ ಅಸಮತೋಲನವಾಗಿರುವ ಭಾಗಗಳಲ್ಲಿ University ತೆರೆಯುವ ಪ್ರಯತ್ನವನ್ನು ಪ್ರಾಮಾಣಿಕವಾಗಿ ಮಾಡಿದ್ದೀರಿ. ಇವತ್ತು ಹುಬ್ಬಳ್ಳಿಯಲ್ಲಿ ತೆರೆಯುತ್ತಿರುವ University ಆದಷ್ಟು ಬೇಗ ಕಾರ್ಯರೂಪಕ್ಕೆ ಬರಲಿ. Section 74 ಏನು ಹೇಳುತ್ತದೆ ಎಂದರೆ ನೀವು Honorary Degrees ಕೊಡಬೇಕಾದ ಸಂದರ್ಭ ಬಂದಾಗ Syndicate is important. Syndicate ನಲ್ಲಿ 2/3rd of Members ಯಾರನ್ನು ಬೇಕಾದರೂ ಮಾಡಬಹುದು ಅಂದಾಗ ಅವರು ಯಾರಿಗೆ ಬೇಕಾದರೂ Doctorate ಅನ್ನು ಕೊಡಬಹುದು. ಇವತ್ತು Syndicate ಗಳ ಗುಣಮಟ್ಟ ಎಷ್ಟಿದೆ ಎನ್ನುವುದನ್ನು ತಾವೇ ಯೋಚಿಸಬೇಕು. Syndicate ಗೆ ಬರತಕ್ಕಂಥವರಿಗೆ ಬಹಳ ಪರಿಣತಿ ಇರುವವರನ್ನು, ಅವರ ಹಿನ್ನೆಲೆಯನ್ನು ನೋಡಿ ತರುವ ರೀತಿಯಲ್ಲಿ ವ್ಯವಸ್ಥೆಯಾಗಬೇಕೆನ್ನುವುದು ನನ್ನ ಸಲಹೆ. ಇವತ್ತು Law University ತೆರೆದು ನೀವು Honorary Degrees ಕೊಡಬೇಕೆಂದಾಗ ಯಾರಿಗೆ ಕೊಡಬೇಕೆಂಬ ಪ್ರಶ್ನೆ ಬಂದಾಗ Section 74(2) ನಲ್ಲಿ "The Honorary Degree or distinction may be conferred only in exceptional cases. It shall be not be conferred as a matter of course. Only such of the persons who have contributed substantially to the advancement of Legal Literature, Legal Philosophy, Legal Profession, Legal Knowledge, Administration of Justice, or any other subject assigned to the Faculty of Law or conspicuous service rendered by them

to the cause of legal education shall be identified for the purpose of grant of such Honorary Degrees." This I agree fully. You should always stick to that. Section 3 ನಲ್ಲಿ "A degree of Doctor of Laws (LLD) Honoris Causa may be conferred upon persons who are distinguished Lawyers, Judges or Jurists, Statesmen or have made noteworthy contribution to the cause of the public" ಎನ್ನುವ ಮಾತನ್ನು ಹೇಳಿದ್ದೀರಿ. ಅದನ್ನು delete ಮಾಡಿದರೆ ಒಳ್ಳೆಯದು. ಕಾರಣವೇನೆಂದರೆ, ಇನ್ಯಾವುದೋ ಒಂದು ದಿವಸ Syndicate recommendation ಆಧಾರದ ಮೇಲೆ honorary Degree ಕೊಡಬೇಕೆಂದಾಗ ಇತ್ತೀಚಿನ ದಿನಗಳಲ್ಲಿ Honorary Degrees ಅನ್ನು ಕೊಡುತ್ತಿರುವುದನ್ನು ನೋಡಿದಾಗ ಅದನ್ನು ಯಾರ್ಯಾರಿಗೋ ಕೊಡುತ್ತಿದ್ದಾರೆ. ನಾನು ಅದರ ಬಗ್ಗೆ ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ. Honorary Degrees ಅನ್ನು ಯಾರ್ಯಾರಿಗೋ ಕೊಡುತ್ತಾರೆ ಎನ್ನುವ ಭಾವನೆ ಜನರಲ್ಲಿದೆ. ನಾನೇಕೆ ಈ ಮಾತನ್ನು ಈ Law University Bill ತರುವ ಸಂದರ್ಭದಲ್ಲಿ ಹೇಳುತ್ತಿದ್ದೇನೆಂದರೆ, ಇಲ್ಲಿ ಬಹಳ ಪ್ರಭಾವಿಗಳು, ನಾವೆಲ್ಲ ಬಹಳಷ್ಟು ಜನ Lawyers ಇರುತ್ತೇವೆ, ನಾವು ಯಾವುದೋ ರೀತಿಯಲ್ಲಿ Honorary Degreesನ್ನು capture ಮಾಡುವುದಕ್ಕೋಸ್ಕರ political ಆಗಿಯೋ ಅಥವಾ ಯಾವುದೋ ರೀತಿಯಲ್ಲಿ ಒತ್ತಡ ತರುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ, only legal professional ಇರುವಂಥವರು, legal ಸಾಹಿತ್ಯಕ್ಕೆ contribute ಮಾಡಿರುವವರು ಅವರಿಗೆ ಸೀಮಿತವಾಗಿ ಇರುವ ರೀತಿಯಲ್ಲಿ ಮಾಡಿದರೆ ಅದಕ್ಕೆ ಘನತೆ ಬರುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ. ನಮ್ಮಲ್ಲಿ Degrees ನಲ್ಲಿ ಬಹಳ ವ್ಯತ್ಯಾಸವಿದೆ. ಎರಡು ವರ್ಷ ಓದಿದರೆ BGL, ಮೂರು ವರ್ಷ ಓದಿದರೆ LL.B, ಪದವಿ ಕೊಡುತ್ತಾರೆ. ಹಾಗೆಯೇ, ಧಾರವಾಡ University ಯಲ್ಲಿ ಓದಿದರೆ LL.B, (special) ಎಂದಾಗುತ್ತದೆ. ಇದೆಲ್ಲ ಹೋಗಬೇಕು. Uniform ಆಗಿ ಇರಬೇಕು. Two years

course ಗೆ BGL ಎಂದು ಇರುವುದು ಏಕೋ ಸರಿಹೋಗಲಿಲ್ಲವೆಂದು ಅನಿಸುತ್ತದೆ. ಮೊದಲಿನ ಹಾಗೆ B.L, LL.B, ಎಂದು ಇಟ್ಟರೆ ಚೆನ್ನಾಗಿರುತ್ತದೆ. ನಾವೆಲ್ಲ Law College ಗಳಲ್ಲಿ ಓದಿ ಬಂದಿರುವವರು. Law College ಗಳ ಅವ್ಯವಸ್ಥೆಯನ್ನು ನೋಡಿದಾಗ ನಮಗೆ ದುಃಖವಾಗುತ್ತದೆ. ನಮಗೆ ಬೇಕಾದಂಥ standard, Law College ಗಳಲ್ಲಿ ಇವತ್ತು ಕಾಣುತ್ತಿಲ್ಲ. ಅದೇ ರೀತಿ Court ನಲ್ಲಿಯೂ ನಿಜವಾಗಿಯೂ ಕೂಡ arguments ಮಾಡುವ ಸಂದರ್ಭ ಬಂದಾಗ, judgement ಬರುವುದನ್ನು ನೋಡಿದಾಗ quality of the judgements ಇರಬಹುದು, arguments ಇರಬಹುದು, ಇವತ್ತು ಬಹಳಷ್ಟು ಕೆಳಮಟ್ಟಕ್ಕೆ ಹೋಗಿದೆ ಎನ್ನುವ ಭಾವನೆ ಇದೆ. ಹಾಗಾಗಿ ಇದನ್ನೆಲ್ಲ ಕೂಡ ಗಮನದಲ್ಲಿಟ್ಟುಕೊಂಡು ಜಾಸ್ತಿ ಒತ್ತು ಕೊಟ್ಟು ಇದರ ಬಗ್ಗೆ ಚಿಂತನೆ ಮಾಡಿದರೆ ಒಳ್ಳೆಯದಾಗುತ್ತದೆ ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತೇನೆ.

ಇನ್ನೊಂದು ಬಹಳ ಮುಖ್ಯವಾಗಿ Law university ಮಾಡಿರುವುದರಿಂದ ನಿಮಗೆ ಯಾವುದೇ ಒಂದು legal matters ಅನ್ನು drafting ಮಾಡಬೇಕೆಂದಾಗ you can also outsource. ನಿಮಗೆ drafting ಬೇಕೆಂದು ಹೇಳಿದರೆ law companies, associates ಇವರೆಲ್ಲರೂ ಇದ್ದಾರೆ. They are getting the benefit. Instead of that Law University can do that ಆ ರೀತಿಯಾಗಿ ನಿಮಗೆ income generation ಆಗಲಿ ಇನ್ನೊಂದು ಆಗಲಿ ಅದಕ್ಕೆ ಹೆಚ್ಚಿನ ಸಹಾಯವಾಗುತ್ತದೆಂದು ನಾನು ಅಭಿಪ್ರಾಯಪಡುತ್ತೇನೆ. ಇದನ್ನೆಲ್ಲವೂ ಕೂಡ ಗಮನದಲ್ಲಿಟ್ಟುಕೊಂಡು ತಾವು ತಂದಿರತಕ್ಕಂಥ ಬಿಲ್ಲನ್ನು ಸ್ವಾಗತಿಸಿ, ಒಂದೇ ಒಂದು ಸಲಹೆ ಏನೆಂದರೆ, ಹುಬ್ಬಳ್ಳಿ ಮತ್ತು ಧಾರವಾಡದ ಮಧ್ಯಭಾಗದಲ್ಲಿ ಇದು ಆದರೆ ಒಳ್ಳೆಯದು. ಏಕೆಂದರೆ, ಯಾವಾಗಲೂ ಕೂಡ ವಿಧಾನ ಸೌಧ, ವಿಕಾಸ ಸೌಧ, ನಮ್ಮ KPSC ಆಫೀಸ್ ಎಲ್ಲಾ ಒಂದು ಕಾಂಪ್ಲೆಕ್ಸ್. ಇದನ್ನು ನೋಡುವುದಕ್ಕೆ ಬಹಳ ಹೆಮ್ಮೆ ಎಂದು ಅನ್ನಿಸುತ್ತದೆ. ಅದೇ ರೀತಿಯಾಗಿ ಇಲ್ಲಿಯೂ ಕೂಡ Agriculture university ಇದೆ Dharwad University ಇದೆ. ಇವೆರಡೂ ಅಕ್ಕಪಕ್ಕದಲ್ಲಿರುವುದರಿಂದ ಇದರ ಮಧ್ಯದಲ್ಲಿಯೇ ಇದನ್ನು ಮಾಡಿ ಹುಬ್ಬಳ್ಳಿ ಅಂಡ್ ಧಾರವಾಡನಲ್ಲಿ ಸೆಟಲ್ ಮಾಡುವುದಾದರೆ, ಅದು ಒಂದು ದೊಡ್ಡ ಕ್ಯಾಂಪಸ್ ಆಗಿ ಕಾಣುತ್ತದೆ. ಬಹಳ attractive ಆಗಿ ಇರುತ್ತದೆ, ಅದು

respectful ಆಗಿರುತ್ತದೆ ಎಂದು ಸಲಹೆ ಮಾಡಿ, ನೀವು ಅದಕ್ಕೆ ಲ್ಯಾಂಡ್ ಅನ್ನು ಅಕ್ವೈರ್ ಮಾಡುವಾಗ ನೀವು ಆ ಭಾಗದಲ್ಲಿ ಮಾಡಿದರೆ ಅದು ಬಹಳ ಒಳ್ಳೆಯದಾಗುತ್ತದೆ.

ಅಧ್ಯಕ್ಷರು :- ಲ್ಯಾಂಡ್ ಸಮಸ್ಯೆ ಎಲ್ಲಾ ಮುಗಿದಿದೆ.

ಶ್ರೀ ಟಿ.ಬಿ. ಜಯಚಂದ್ರ :- ಎಷ್ಟು ಎಕರೆ ತೆಗೆದುಕೊಂಡಿದ್ದೀರಾ?

ಅಧ್ಯಕ್ಷರು :- ರೆವಿನ್ಯೂ ಮತ್ತು ಕಾರ್ಪೋರೇಷನ್ ಸೇರಿದಂತೆ ಸುಮಾರು 50 ಎಕರೆ ಲ್ಯಾಂಡ್ ಅನ್ನು ಹ್ಯಾಂಡ್ ಓವರ್ ಆಗಿದೆ. ಲ್ಯಾಂಡ್ ಸಮಸ್ಯೆ ಇಲ್ಲ.

ಶ್ರೀ ಟಿ.ಬಿ. ಜಯಚಂದ್ರ :- ಬರಿ 50 ಎಕರೆ ಮಾತ್ರ ತೆಗೆದುಕೊಂಡಿದ್ದೀರಾ?

ಶ್ರೀ ಎಸ್. ಸುರೇಶ್ ಕುಮಾರ್ :- ನಂತರ ಅಡಿಷನ್ ಮಾಡಿಕೊಳ್ಳುತ್ತೇವೆ.

ಶ್ರೀ ಟಿ.ಬಿ.ಜಯಚಂದ್ರ :- ನಮಗೆ ಏನು problem ಎಂದರೆ, ಲಾ ಡಿಪಾರ್ಟಮೆಂಟ್‌ಗೆ, ಫೈನಾನ್ಸ್ ಡಿಪಾರ್ಟಮೆಂಟ್‌ನವರು ದುಡ್ಡು ಕೊಡುವುದಿಲ್ಲ, ಅದೇ ಸಮಸ್ಯೆಯಾಗಿದೆ. ಕೋರ್ಟುಗಳನ್ನು ನೋಡಿ, ಮತ್ತು ಅಲ್ಲಿರುವಂಥ ಜಡ್ಜ್‌ಗಳವರಿಗೆ ಕ್ವಾರ್ಟರ್ಸ್ ಇರುವುದಿಲ್ಲ ಇದು ಸರ್ವೇ ಸಾಮಾನ್ಯ. ಈ ಲಾ ಯೂನಿವರ್ಸಿಟಿಗೂ ಅದೇ ಗತಿ ಬರಬಾರದು. ಆದುದರಿಂದ ಈ ಎಲ್ಲಾ ರೀತಿಯ ಮುನ್ನೆಚ್ಚರಿಕೆಯನ್ನಿಟ್ಟುಕೊಂಡು ತಾವು ನಡೆಸಿಕೊಡುತ್ತೀರಿ ಎನ್ನುವ ಭಾವನೆ ವ್ಯಕ್ತಮಾಡಿ ನಾನು ಇದಕ್ಕೆ ಸ್ವಾಗತಿಸಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಮಲ್ಲಿಕಾರ್ಜು ಖರ್ಗೆ (ವಿರೋಧ ಪಕ್ಷದ ನಾಯಕರು) :- ಈಗ ತಂದಿರುವಂಥ ಬಿಲ್‌ಗೆ ನಾನು ಕೂಡ ಸ್ವಾಗತಿಸುತ್ತೇನೆ. ವಿಶೇಷವಾಗಿ ತಮ್ಮ ಮತಕ್ಷೇತ್ರದಲ್ಲಿ ಇದು ಆಗುತ್ತಿರುವುದು ಸಂತೋಷದ ಸಂಗತಿ.

ಅಧ್ಯಕ್ಷರು :- ಹುಬ್ಬಳ್ಳಿ - ಧಾರವಾಡದಲ್ಲಿ ಆಗುತ್ತಿರುವುದು.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಹುಬ್ಬಳ್ಳಿ - ಧಾರವಾಡ ಎಂದರೂ ಅದು ನಿಮ್ಮದೇ ಹೆಡ್ ಕ್ವಾರ್ಟರ್ ತಾನೆ?

ಅಧ್ಯಕ್ಷರು :- ಈ ಬಿಲ್ ಅನ್ನು ಕಾಂಗ್ರೆಸ್ ಸರ್ಕಾರ ಇದ್ದಾಗಲೇ ತಂದಿದ್ದು.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಆಗಲೂ ಕೂಡ ಅಧ್ಯಕ್ಷರ ಮತಕ್ಷೇತ್ರದಲ್ಲಿ ಆಗಲಿ ಎನ್ನುವ ಮುಂದಾಲೋಚನೆಯಿಂದಲೇ ಇದನ್ನು ಮಾಡಿದ್ದು. ಇದರಲ್ಲಿ ಸೆಕ್ಷನ್

68 ನಲ್ಲಿ "Appointment of other non-teaching and ministerial staff" ಎಂದು ಇದೆ. ಇದರಲ್ಲಿ ಏನು ಇದೆ ಎಂದರೆ, Board of appointment ನ್ನು constitute ಮಾಡುತ್ತಿದ್ದೀರಿ. ಈ Board constitute ಮಾಡುವುದರಲ್ಲಿ ತಾವು ಈ SC-ST Members ಅನ್ನು ಒಂದೆರಡು ಹಾಕುವುದು ಅವಶ್ಯಕವಿದೆ. The Board shall consist of the Vice Chancellor, Secretary, One expert nominated by the Vice chancellor ಎಂದು ಇದೆ. ಆದರೆ, ಇದರಲ್ಲಿ you have to look after interest of Scheduled Caste boys or the staff. ಏಕೆಂದರೆ ಅನೇಕ ಸಾರಿ ತಮಗೆ ಗೊತ್ತಿರುವಂತೆ ರೆಕ್ರೂಟ್‌ಮೆಂಟ್ ರೂಲ್ಸ್ ಪ್ರಕಾರ ಮಾಡುವುದಿಲ್ಲ. ಅನೇಕ ಸಾರಿ ರೂಲ್ಸ್, ಡೈರೆಕ್ಷನ್ ಇದ್ದರೂ ನಮ್ಮದು ಇಂಡಿಪೆಂಡೆಂಟ್ ಯೂನಿವರ್ಸಿಟಿ we are not bound ಅಥವಾ ಇದರಲ್ಲಿ amendment ಇಲ್ಲವೆಂದು ಸಾಕಷ್ಟು ಸಾರಿ ರಿಜೆಕ್ಟ್ ಮಾಡುವುದನ್ನು ನಾವು ನೋಡಿದ್ದೇವೆ. ಉದಾಹರಣೆಗೆ ಹೇಳುವುದಾದರೆ, Agriculture University of Bangalore. ಅಲ್ಲಿ ಈ provision ಇಲ್ಲವೆಂದು ತಿಳಿದುಕೊಂಡೇ ಅನೇಕ ಸಾರಿ ರಿಕ್ರೂಟ್‌ಮೆಂಟ್ postpone ಮಾಡಿದರು. ಅದಕ್ಕೆ ತಾವು ಇಲ್ಲಿ ಒಂದು ಅಂಶವನ್ನು ಸೇರಿಸಿದ್ದೀರಿ. "68 (5) While preparing the list of candidates selected for appointment to the direct recruitment vacancies, the Board shall comply with the orders issued by the government from time to time for reservation of posts for the Scheduled Castes, the Scheduled Tribes and Other Backward class." ಇದರಲ್ಲಿ ಇದೆ. ಅಂದರೆ appointment ಗೆ ಇರುತ್ತಾರೆ, ಆದರೆ ಇದು ಸರಿನೋ ತಪ್ಪೋ ಎಂದು ನೋಡುವ ಒಬ್ಬ Board of Director ಯಾರೂ ಇರಲಿಲ್ಲ ಎಂದರೆ ಏನಾಗುತ್ತದೆ, ಕೇಳುವವರೇ ಇರುವುದಿಲ್ಲ. ಆಗ ತಮಗೆ ಗೊತ್ತಿರುವಂತೆ ಬೇರೆ ಯೂನಿವರ್ಸಿಟಿಗಳಲ್ಲಿ ಇತ್ತೀಚಿಗೆ ಪ್ರಾವಿಜನ್ ಮಾಡಿಕೊಂಡಿದ್ದಾರೆ. ನೀವು ಈ ಯೂನಿವರ್ಸಿಟಿಯಲ್ಲಿ ಮಾಡದೇ

ಹೋದರೆ ಏನಾಗುತ್ತದೆ ಎಂದರೆ ಇಲ್ಲಿ ಯಾರು ಕೇಳುವವರು ಇರುವುದಿಲ್ಲ ಜೊತೆಗೆ ತಾಪತ್ರಯಗಳು ಏಲ್ಲಿ ಬರುತ್ತವೆಂದರೆ mostly promotionನಲ್ಲಿ ಬರುತ್ತವೆ. ಏಕೆಂದರೆ ಒಂದೇ ವೇಕೆನ್ಸಿ ಇರುತ್ತದೆ, ಇದನ್ನು ಹೇಗೆ ಟ್ರೀಟ್ ಮಾಡಬೇಕು? ಇದನ್ನು ಜನರಲ್ ಎಂದು ಮಾಡಬೇಕೆ? ರಿಸರ್ವ್ ಎಂದು ಮಾಡಬೇಕೆ? ರೋಸ್ಟರ್‌ನಲ್ಲಿ ಹೇಗೆ ಫಿಕ್ಸ್ ಮಾಡಬೇಕು? ಇದರಲ್ಲಿ ಒಬಿಸಿ ಇರಬಹುದು, ಎಸ್‌ಸಿ-ಎಸ್‌ಟಿ ಇರಬಹುದು, ಆಗ ಇದು ಬಹಳ ಕಷ್ಟವಾಗುತ್ತದೆ. ಅದಕ್ಕಾಗಿ ತಾವೇನು ರೂಲ್ 68 & 69 ಇದನ್ನು ಸ್ಪ್ರಿಕ್ಟ್ ಆಗಿ ಇಂಪ್ಲಿಮೆಂಟ್ ಮಾಡಬೇಕಾದರೂ ಒಂದು ಪ್ರಾವಿಜನ್ ಮಾಡುವ ಅವಶ್ಯಕತೆ ಇದೆ. ಇದನ್ನು ಕೂಡ ಮಿನಿಮಮ್ ಅಲ್ಲಿ ಯಾರೂ ಡೈರೆಕ್ಟರ್ ಆದರೂ ಅವನು ಎಲ್‌ಎಲ್.ಬಿ., ಗ್ರಾಜ್ಯುಯೇಟ್ ಇರಲಿ, ಲಾಯರ್ ಇರಲಿ, ಎಕ್ಸ್‌ಪರ್ಟ್ಸ್ ಇರಲಿ, ರಿಟೈರ್ಡ್ ಜಡ್ಜ್ ಇರಲಿ, ಆ ಕಮ್ಯುನಿಟಿಗೆ ಸಂಬಂಧಪಟ್ಟ ಹಾಗೆ ಇರಬೇಕಾಗುತ್ತದೆ. ಕೊನೇಪಕ್ಷ ಬಿ.ಎ., ಎಲ್.ಎಲ್.ಬಿ., ಎಲ್‌ಎಲ್.ಎಂ., ಇವುಗಳ ಯಾವುದಾದರೊಂದರಲ್ಲಿ ಡಾಕ್ಟರೇಟ್ ಮಾಡಿದವರು ಇದ್ದರೆ, ಇದರಲ್ಲಿ ಕ್ವಾಲಿಟಿ ಅಪಾಯಿಂಟ್‌ಮೆಂಟ್ ಮಾಡುವುದಕ್ಕೆ ಬರುತ್ತದೆ. ಇಲ್ಲದೆ ಇದ್ದರೆ, ಪೊಲಿಟಿಕಲ್ ಅಪಾಯಿಂಟ್‌ಮೆಂಟ್‌ಗಳಾಗುತ್ತವೆ. ಅದು ನಾವೇ ಇರಲಿ, ನೀವೇ ಇರಲಿ, ರಾಜಕೀಯದಲ್ಲಿ ಏನು ಮಾಡುತ್ತೇವೆಂದರೆ ಯಾರನ್ನಾದರೂ ರೆಕಮೆಂಡ್ ಮಾಡಿದ ತಕ್ಷಣ ಅವನಿಗೆ ಅಲ್ಲಿಗೆ ಹಾಕಿಬಿಡುತ್ತೇವೆ, ಅವನು ಆ ಪೋಸ್ಟಿಗೆ ಅರ್ಹ ಇದ್ದಾನೋ, ಇಲ್ಲವೋ ಎಂಬುದನ್ನು ನೋಡುವುದಿಲ್ಲ. ನಮ್ಮ ಪಾರ್ಟಿಯವ ಅವನು ಯಾರೇ ಆಗಿರಲಿ ಎಂದು ಹಾಕಿ ಬಿಟ್ಟು ವಾದ ಮಾಡುತ್ತೇವೆ. ಹೀಗಾಗಿ ತಾವು ಈ ಎರಡು ಅಂಶಗಳನ್ನು ಗಮನಿಸಬೇಕಾದುದು ಬಹಳ ಮುಖ್ಯ. ಮೂರನೆಯದಾಗಿ ಅನೇಕ ಖಾಸಗಿ ಕಾಲೇಜುಗಳಿವೆ. ಅನುದಾನಿತ ಸಂಸ್ಥೆಗಳಿವೆ. ಅಲ್ಲಿ ವೇಕೆನ್ಸಿಗಳನ್ನು ಫಿಲ್ ಅಪ್ ಮಾಡಬೇಕಾದರೆ, ಸುಮಾರು ಹತ್ತಾರು ಸಲ ಅಡ್ವಾಡಿದರೂ ಕೂಡ ವೇಕೆನ್ಸಿ ಫಿಲ್ ಅಪ್ ಆಗುವುದಿಲ್ಲ. ಇತ್ತೀಚೆಗೆ ತಮಗೆ ಗೊತ್ತಿರುವಂತೆ ಎಲ್‌ಎಲ್‌ಬಿ ಕೋರ್ಸ್ 3 ವರ್ಷ ಮತ್ತು 5 ವರ್ಷದ್ದು ಇದೆ. ಮಕ್ಕಳಿಗೆ ಒಳ್ಳೆಯ ಟೀಚರ್ ಇರಲಿಲ್ಲವೆಂದರೆ, ಸ್ವಾಭಾವಿಕವಾಗಿ ಅವರು ಮುಂದೆ ಒಳ್ಳೆಯ ಅಭ್ಯಾಸ ಮಾಡಿ ಹೊರಗಡೆ ಬರುವುದು ಹೇಗೆ? ಇತ್ತೀಚೆಗೆ ಎಲ್ಲಾ ರಾಜ್ಯಗಳಲ್ಲಿ ನ್ಯಾಷನಲ್ ಲಾ ಕಾಲೇಜುಗಳಾಗಿವೆ. ಈ ಕಾಲೇಜುಗಳಾಗಿರುವುದರಿಂದ ಅಲ್ಲಿಗೆ ನಮ್ಮ ವಿದ್ಯಾರ್ಥಿಗಳು ಕಾಂಪೀಟ್ ಮಾಡುವುದಕ್ಕೆ ಸಾಧ್ಯವಿಲ್ಲ. ಕನಿಷ್ಠ ಪಕ್ಷ ಟೀಚರ್ಸ್ ಇದ್ದರೆ with all facilities, ಆಗ ವಿದ್ಯಾರ್ಥಿಗಳು ಆ ಕೋರ್ಸು ಮುಗಿಸಿ, ಒಳ್ಳೆಯ ರೀತಿ ಅಭ್ಯಾಸ ಮಾಡಿ ಹೊರಗಡೆ ಬಂದರೆ, ಬೇರೆ ಕಡೆಗೂ ಕೂಡ ಅವರು ನೌಕರಿಗೆ ಸೇರಿಕೊಳ್ಳುವುದಕ್ಕೆ

ಅವಕಾಶಗಳಿರುತ್ತವೆ. ಮತ್ತೊಂದು ನನ್ನ ಅನಿಸಿಕೆ ಏನೆಂದರೆ, ಅದಕ್ಕೆ ಯಾವ ರೀತಿಯಾಗಿ ನೀವು ನಿಮ್ಮ ರೂಲ್ಸ್‌ನಲ್ಲಾಗಲಿ ಅಥವಾ ಬೇರೆ ಇಲಾಖೆಗಳಲ್ಲೂ ಕೂಡ ಎಲ್ಲೆಲ್ಲಿ ತಮಗೆ ಎಲ್‌ಎಲ್.ಬಿ., ಕ್ವಾಲಿಫಿಕೇಷನ್ ಬೇಕು ಅಂಥ ಕಡೆಗೆ ತಾವು ರೆಕ್ರೂಟ್‌ಮೆಂಟ್‌ನಲ್ಲಿ ಹಾಕುವುದು ಒಳ್ಳೆಯದು. ಉದಾಹರಣೆಗೆ ಹೇಳುವುದಾದರೆ, ಸಬ್ ಇನ್ಸ್‌ಪೆಕ್ಟರ್ ನೇಮಕಾತಿಯಲ್ಲಿ ಸಬ್ ಇನ್ಸ್‌ಪೆಕ್ಟರ್ಸ್ ಗೆ ತಾವು ಎಲ್‌ಎಲ್.ಬಿ., ಕಡ್ಡಾಯವಾಗಿ ಮಾಡಿದರೆ, ಇಲ್ಲಾಂದ್ರೆ ಅವರು ಎರಡು ವರ್ಷದೊಳಗೆ ಈ ಕೋರ್ಸ ಮುಗಿಸಬೇಕೆಂದು ಕಡ್ಡಾಯ ಮಾಡಿದರೆ, ಎಲ್‌ಎಲ್‌ಬಿ ಮಾಡಿದಂಥ ಸಾಕಷ್ಟು ಜನರಿಗೆ ಅವಕಾಶ ಸಿಕ್ಕುತ್ತದೆ. ನಂತರ ಅವರಿಗೆ ಬೇಸಿಕ್ ಆಗಿ ಲಾ ನಾಲೆಜ್ ಇರುವುದರಿಂದ, ಕಾನೂನು ಬಗ್ಗೆ ಅವರು ಅಭ್ಯಾಸ ಮಾಡಿರುವುದರಿಂದ IPC, Cr.PC, ಬೇರೆ ಬೇರೆ ಪೊಲೀಸ್ ಆಕ್ಟ್‌ಗಳನ್ನು ತಿಳಿದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಹೀಗಾಗಿ ಅವರಿಗೆ ನೇರವಾಗಿ ಸಂಬಂಧಪಡದೇ ಇದ್ದರೂ ಅಲ್ಲಿ ಈ ಡಿಗ್ರಿ ರಿಕ್ವೈರ್‌ಮೆಂಟ್ ಎಂದು ಹೇಳಿದರೆ ಖಂಡಿತವಾಗಿ ಆ ಇಲಾಖೆಗೂ ಕ್ವಾಲಿಟಿ ಕ್ಯಾಂಡಿಡೇಟ್ ಸಿಗುತ್ತಾರೆ ಮತ್ತು ಎಲ್‌ಎಲ್.ಬಿ., ಗೆ ಬರತಕ್ಕಂಥದ್ದಕ್ಕೆ ಒಂದು ಸ್ಕೋಪ್ ಸಿಗುತ್ತದೆ. ಇಲ್ಲದಿದ್ದರೆ ಎಲ್‌ಎಲ್.ಬಿ., ವಿದ್ಯಾರ್ಥಿಗಳಿಗೆ ಎಲ್ಲೂ ಕೂಡ ಯಾವುದೇ ರೀತಿಯ ಸ್ಕೋಪ್ ಇಲ್ಲ. ಏಕೆಂದರೆ, ಅವರು ಶಾಲೆಗೆ ಟೀಚರ್ ಆಗಿ ಹೋಗುವುದಕ್ಕೆ ಬರುವುದಿಲ್ಲ. ಬೇರೆ ಕಡೆ ಪ್ರಾಕ್ಟೀಸ್ ಮಾಡಬೇಕಾದರೆ 8-10 ಜನ ಒಳ್ಳೆಯ ಪ್ರಾಕ್ಟೀಸ್ ಮಾಡತಕ್ಕಂಥ ಲಾಯರ್ ಇದ್ದರೆ ನೂರಾರು ಕೇಸ್‌ಗಳು ಒಂದು ಕಡೆ ಹೋಗುತ್ತವೆ ಹೊರತಾಗಿ, ಬೇರೆ ಕಡೆ ಹೋಗತಕ್ಕಂಥ ಅವಕಾಶ ಸಿಗುವುದು ಬಹಳ ಕಷ್ಟ. ಅದಕ್ಕಾಗಿ ಇಂಥ ಎಲ್ಲಾ ಅಂಶಗಳನ್ನು ಗಮನಿಸಿ, ಎಲ್ಲೆಲ್ಲಿ ಸಾಧ್ಯವಿದೆ ಆ ಇಲಾಖೆಯಲ್ಲಿ ಹಾಕಿ. ಒಂದು ವೇಳೆ ಸಿಗದೇ ಇದ್ದರೆ ಕೆಲವು ಕಡೆ ರಿಲ್ಯಾಕ್ಸ್ ಮಾಡಿ for weaker sections, SC,ST, ಇವರಿಗೆ ಮಾಡಿ, ಪುನಃ ಇವರು ಎರಡು ವರ್ಷದೊಳಗೆ ಆ ಕೋರ್ಸ್ ಮಾಡಬೇಕೆಂದು ಮಾಡಿ. ಹಿಂದೆ ತಮಗೆ ಗೊತ್ತಿದೆ. ಈ ಶಿಕ್ಷಣ ಕ್ಷೇತ್ರದಲ್ಲಿ ಬಿಎಡ್, ಟಿಸಿಹೆಚ್, ಇವೆಲ್ಲಾ ಮೊದಲು ಕಡ್ಡಾಯ ಇರಲಿಲ್ಲ. ನಂತರ ಈ ಬಿಎಡ್ ಮತ್ತು ಟಿಸಿಹೆಚ್‌ಗಳನ್ನು ಕಡ್ಡಾಯ ಮಾಡಿದರು. ಟೀಚರ್ಸ್ ಸಿಗದೇ ಇದ್ದಾಗ, ಟಿಸಿಹೆಚ್ ಗ್ರಾಜ್ಯುಯೇಟ್ಸ್ ಬಿಎಡ್ ಗ್ರಾಜ್ಯುಯೇಟ್ಸ್ ಸಿಗದೇ ಇದ್ದಾಗ ನೇಮಕಾತಿ ಮಾಡಿದ ಮೇಲೆ ಅವರನ್ನು ಜಿಲ್ಲಾ ಕೇಂದ್ರಗಳಿಗೆ ಆ ಕೋರ್ಸನ್ನು ಮುಗಿಸಲಿಕ್ಕೆ ಕಳುಹಿಸುತ್ತಿದ್ದರು.

ಹಾಗೆ ಕೆಲವು ಸ್ಕೋಪ್‌ಗಳನ್ನು ನೀವು ಕ್ರಿಯೇಟ್ ಮಾಡಿದರೆ ಖಂಡಿತವಾಗಿ ಈ ಒಂದು ಕಾನೂನು ವಿಶ್ವವಿದ್ಯಾಲಯಕ್ಕೆ ಹೆಚ್ಚಿನ ಶಕ್ತಿ, ಬೆಲೆ ಬರುತ್ತದೆ. ಮತ್ತೆ ಅಲ್ಲಿಗೆ ವಿದ್ಯಾರ್ಥಿಗಳು ಕೂಡ absorb ಆಗುತ್ತಾರೆ. ಇವತ್ತಿನ ದಿವಸ ಒಂದೊಂದು ಬಾರ್ ಕೌನ್ಸಿಲ್‌ನಲ್ಲಿ ಸುಮಾರು 1000 ಜನ ರಿಜಿಸ್ಟರ್ ಮಾಡಿಕೊಂಡು ಸುಮ್ಮನೆ ಕುಳಿತುಕೊಂಡಿರುತ್ತಾರೆ. ಆದ್ದರಿಂದ, ಅಂಥವರಿಗೆ employment ಸಿಗಬೇಕಾದರೆ, ಕಂಪನಿಗಳು, ಹೋಂ ಡಿಪಾರ್ಟ್‌ಮೆಂಟ್ ಮತ್ತೆ ಬೇರೆ ಬೇರೆ ಇಲಾಖೆಗಳಲ್ಲಿ ಕಡ್ಡಾಯವಾಗಿ ಎಲ್‌ಎಲ್.ಬಿ., ಕ್ವಾಲಿಫಿಕೇಷನ್ ಇರಲೇ ಬೇಕೆಂದು ನಾವು ಮಾಡಿದರೆ ಇದರಿಂದ ಎಲ್‌ಎಲ್‌ಬಿ ಮುಗಿಸಿರುವವರಿಗೆ ಪ್ರಯೋಜನ ಮತ್ತು ಅನುಕೂಲವಾಗುತ್ತದೆ. ಈ ಬಿಲ್‌ನ್ನು ನಾವೆಲ್ಲರೂ ಒಪ್ಪಕೊಳ್ಳುತ್ತೇವೆ. ಈ ಬಿಲ್‌ಗೆ ಸಂಬಂಧಪಟ್ಟಂತೆ ಎರಡು ಸಲಹೆಗಳನ್ನು ಕೊಟ್ಟಿದ್ದೇನೆ. ಆದ್ದರಿಂದ, ಇದರ ಬಗ್ಗೆ ದಯವಿಟ್ಟು ಚಿಂತನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ (ನಗರಾಭಿವೃದ್ಧಿ,ಕಾನೂನು, ನ್ಯಾಯ, ಮಾನವಹಕ್ಕುಗಳ ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದ ನಾಯಕರು ಮತ್ತು ಉಪನಾಯಕರು ಒಂದಿಷ್ಟು ಸಲಹೆಗಳನ್ನು ಕೊಟ್ಟಿದ್ದಾರೆ. ಶ್ರೀ ಜಯಚಂದ್ರರವರು ಮಾತನಾಡುತ್ತಾ Section 74(3) ನಲ್ಲಿ "A degree of Doctor of Laws(LL.D) Honoris Causa may be conferred upon persons who are distinguished Lawyers, Judges or Jurists, Statesmen or have made noteworthy contribution to the cause of the public ಇದರಿಂದ ಅನಾವಶ್ಯಕವಾಗಿ misuse ಆಗತಕ್ಕಂಥ chances ಇರುತ್ತದೆ. ಅದಕ್ಕೋಸ್ಕರ ಅದು ಬೇಡ. ಹೇಗಿದ್ದರೂ 74(2) ನಲ್ಲಿ Only such of the persons who have contributed substantially to the advancement of Legal Literature, Legal Philosophy, Legal Profession, Legal Knowledge, Administration of Justice or any other subject" ಎಂದು ಇರುವಾಗ ನನಗನ್ನಿಸುತ್ತದೆ, 74(3)ಯನ್ನು ನಾವು ಡಿಲೀಟ್ ಮಾಡಬಹುದು, Without giving room for any misuse

ಎರಡನೆಯದು ತಾವು ಹೇಳಿದ್ದೀರಾ, ಏನೆಂದರೆ, Law college ಗಳಲ್ಲಿ infrastructure ಇಲ್ಲ ಮತ್ತು ಟೀಚರ್ಸ್ ಇಲ್ಲವೆಂದು ತಾವು ಹೇಳಿದ್ದೀರಿ. ನಮ್ಮಲ್ಲಿ ಮೂಲಭೂತ ಸೌಕರ್ಯಗಳು ಮತ್ತು ಟೀಚರ್ಸ್ ಇಲ್ಲವೆಂದು ಕೇಸ್ ಹಾಕುವುದಕ್ಕೆ ಬಹಳಷ್ಟು ಕಡೆ Law students ಗೆ ಆವಾಗಲೇ training. ಕೇಸ್ ಹಾಕಿ ಪ್ರಾಕ್ಟಿಕಲ್ ಟ್ರೈನಿಂಗ್ ಹೋಗುವಂಥ ಸ್ಥಿತಿ ಇದೆ. ಆದ್ದರಿಂದ, ತಾವು ಹೇಳಿರುವುದು ಅಕ್ಷರಶಃ ನಿಜ. ಎಲ್ಲಿ Law collegeನಲ್ಲಿ ಟೀಚರ್ಸ್ ಇಲ್ಲ, ಮತ್ತೆ ನೇಮಕಾತಿಯನ್ನು ಮಾಡಿಕೊಳ್ಳುತ್ತಿಲ್ಲ. ಹಾಗೆಯೇ facilities ಕೂಡ ಇಲ್ಲ. ಆ ಕಡೆಯೂ ಕೂಡ ನಾವು ಗಮನ ಕೊಡಬೇಕಾಗುತ್ತದೆ. ಈ ವಿಶ್ವವಿದ್ಯಾಲಯದಿಂದ ಕೂಡ ನಾವು ಗಮನ ಕೊಡುತ್ತೇವೆ. Section 68ರಲ್ಲಿ Board of Directors ನಲ್ಲಿ ಎಸ್‌ಸಿ:ಎಸ್‌ಟಿ ರವರು ಇರಬೇಕೆಂದು ತಾವು ಹೇಳಿದ್ದೀರಿ. Syndicate ನಲ್ಲಿ "Section 29(g) five members nominated by the Government of whom one shall be a person belonging to the Scheduled Castes or the Scheduled Tribes, one to Other Backward Classes and three others of whom one shall be a woman from among the members of the legal profession or from the members of the law teaching faculty" ಎಂದು ಇದೆ. So, I think that is covered. ತಮ್ಮ ಅನಿಸಿಕೆ, ಅಪೇಕ್ಷೆ ಏನಿದೆ ಅದು ಇದರಲ್ಲಿ ಕೂಡ ಕವರ್ ಆಗುತ್ತದೆ. ತಾವು ಬಹಳ ಒಂದು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದೀರಿ. ಅದೇನೆಂದರೆ, ರಾಜ್ಯದಲ್ಲಿ ಬೇರೆ ಬೇರೆ ಕಡೆ ನೇಮಕಾತಿ ಮಾಡುವಾಗ ಎಲ್ಲೆಲ್ಲಿ ಎಲ್‌ಎಲ್.ಬಿ., qualification ಅವಶ್ಯಕತೆ ಇದೆ ಎಂದು ಅನಿಸಿದರೆ ಅಂದರೆ ಅಲ್ಲಿ ಕಾನೂನಿನ ಪರಿಜ್ಞಾನದ ಬೇಕಾಗುವುದಾದರೆ ಅಂಥ ಕಡೆ minimum LL.B qualification ಅನ್ನು ಕಡ್ಡಾಯ ಮಾಡಬೇಕೆಂದು ಹೇಳಿದ್ದೀರಿ. ಇದು ಬಹಳ ಅಗತ್ಯ ಇದೆ. ಈಗಾಗಲೇ ಇದರ ಬಗ್ಗೆ ಕೆಲವು ಕಡೆ ಈಗಾಗಲೇ ಯೋಚನೆ ಮಾಡಿದ್ದೇವೆ. ಈ ಒಂದು Added qualification ಅನ್ನು ನಾವು ಅನುಷ್ಠಾನಕ್ಕೆ ತರುತ್ತೇವೆ. ತಾವು ನೀಡಿರುವ ಸಲಹೆಗಳನ್ನು ಖಂಡಿತ ಅನುಷ್ಠಾನಕ್ಕೆ

ತರುತ್ತೇವೆ. ಏಕೆಂದರೆ, ಇದೊಂದು ಬಹಳ ಮಹದಾಕಾಂಕ್ಷೆಯ ವಿಶ್ವವಿದ್ಯಾಲಯ ಆಗಿದೆ. ಇದು ಅಗಬೇಕೆಂದು ಎಲ್ಲರೂ ಕೂಡ ಬಯಸಿದ್ದರು. ಆದ್ದರಿಂದ, ಇದು ಒಳ್ಳೆಯ ವಿಶ್ವವಿದ್ಯಾಲಯ ಆಗಬೇಕು. National Law School ರೀತಿಯಲ್ಲಿಯೇ ನಮ್ಮ Law University ಕೂಡ ಒಳ್ಳೆಯ ಹೆಸರು ತೆಗೆದುಕೊಳ್ಳುವುದಕ್ಕೆ ನಾವು ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳುವುದಕ್ಕೆ ಬಯಸುತ್ತೇನೆ. ಆದ್ದರಿಂದ, ಈ ವಿಧೇಯಕವನ್ನು ದಯವಿಟ್ಟು ಅಂಗೀಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ, "2009ನೇ ಸಾಲಿನ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ವಿಧೇಯಕವನ್ನು ಪರ್ಯಾಲೋಚಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 73ರವರೆಗೆ

ಅಧ್ಯಕ್ಷರು:- "ಖಂಡ 2 ರಿಂದ 73ರವರೆಗೆ ಮತ್ತು 74ರಿಂದ 93 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2ರಿಂದ 73ರವರೆಗೆ ಮತ್ತು 74ರಿಂದ 93ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ತಿದ್ದುಪಡಿಯಾದ 73ನೇ ಖಂಡ ಮತ್ತು 74ರಿಂದ 93ರವರೆಗೆ

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ, ಖಂಡ 73 ಮತ್ತು 74ರಿಂದ 93ರ ವರೆಗೆ ತಿದ್ದುಪಡಿಯಾದಂತೆ ಈ ವಿಧೇಯಕದ ಅಂಗವಾಗಿರುತ್ತದೆ.

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಖಂಡ 73 ಮತ್ತು 74ರಿಂದ 93ರವರೆಗಿನ ತಿದ್ದುಪಡಿಯಾದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.)

ಖಂಡ 1 ಇತ್ಯಾದಿ

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ, "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಸ್. ಸುರೇಶ್ ಕುಮಾರ್(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :- ಮಾನ್ಯ ಅಧ್ಯಕ್ಷರೆ, 2009ನೇ ಸಾಲಿನ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ (ತಿದ್ದುಪಡಿ)ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು:- ಪ್ರಸ್ತಾವ ಏನೆಂದರೆ, "2009ನೇ ಸಾಲಿನ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ (ತಿದ್ದುಪಡಿ)ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

(3) ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ,2009

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಕರುಣಾಕರ ರೆಡ್ಡಿ (ಕಂದಾಯ ಸಚಿವರು) :- ಮಾನ್ಯ ಅಧ್ಯಕ್ಷರೆ, "2009ನೇ ಸಾಲಿನ ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಕರುಣಾಕರ ರೆಡ್ಡಿ (ಕಂದಾಯ ಸಚಿವರು) :- ಮಾನ್ಯ ಅಧ್ಯಕ್ಷರೆ ಸದರಿ ವಿಧೇಯಕಕ್ಕೆ ಸಂಬಂಧಪಟ್ಟಂತೆ ವಿವರಣೆ ಕೊಡುವುದಕ್ಕೆ ಬಯಸುತ್ತೇನೆ. ಮಾನವ ಕಲ್ಯಾಣಕ್ಕಾಗಿ ಕನಕದಾಸರು ಮಾಡಿರುವ ಸಾಧನೆ ಮತ್ತು ನೀಡಿರುವ